817 (722) ಶ್ರೀ ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿ ವಲಯದಲ್ಲಿ ಮಂಜೂರಾದ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಎಷ್ಟು;

ಆ) ಈವರೆಗೆ ಭರ್ತಿಗೊಳಿಸಲಾದ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಎಷ್ಟು;

ಇ) ಖಾಲಿ ಇರುವ ಹುದ್ದೆಗಳೆಷ್ಟು; ಇದನ್ನು ಯಾವಾಗ ಭರ್ತಿಮಾಡಲಾಗುವುದು?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ವಲಯದಲ್ಲಿ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ 918

ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ: 801 ಖಾಲಿ ಹುದ್ದೆಗಳ ಸಂಖ್ಯೆ:117

ಇ) ಈ ಖಾಲಿ ಹುದ್ದೆಗಳನ್ನು ಈಗಾಗಲೇ ನೇಮಕಾತಿ ಸಂಬಂಧ ಅಧಿಸೂಚನೆ ನೀಡಿರುವ 4768 ಹುದ್ದೆಗಳಲ್ಲಿ ಸದರಿ ಹುದ್ದೆಗಳೂ ಸೇರಿರುತ್ತವೆ. ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇದ್ದು, ಇದು ಇತ್ಯರ್ಥವಾದ ಕೂಡಲೇ ಈ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

818 (723) ಶ್ರೀ ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಶಾಲಾ ಕಟ್ಟಡ ಕಾಮಗಾರಿಗೆ ಹಣ ಬಿಡುಗಡೆಯಾಗದಿರಲು ಕಾರಣವೇನು;

ಆ) ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈವರೆವಿಗೂ ಮಂಜೂರಾಗದಿರುವುದಕ್ಕೆ ಕಾರಣಗಳೇನು;

ಈ)ಈ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ.

ಉ) ಉಡುಪಿ ಜಿಲ್ಲೆಗೆ ಬಿಡುಗಡೆಯಾಗಿರುವ ಹಣ ಎಷ್ಟು; ವಿವರ ನೀಡುವುದು?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 2004-05ರ ಶೈಕ್ಷಣಿಕ ಮಾಹಿತಿ ಆಧಾರದ ಮೇಲೆ ಉಡುಪಿ ಜಿಲ್ಲೆಗೆ ಯಾವುದೇ ಹೊಸ ಕೊಠಡಿಗಳ ಅವಶ್ಯಕತೆಯಿಲ್ಲವೆಂದು ಕೇಂದ್ರ ಸರ್ಕಾರ ಅಭಿಪ್ರಾಯ

ಪಟ್ಟಿರುವ ಹಿನ್ನೆಲೆಯಲ್ಲಿ 2006–07ನೇ ಸಾಲಿನಲ್ಲಿ ಸಿವಿಲ್ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಈ ಬಗ್ಗೆ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯವ್ಯಯ 2006–07 ಇದರಲ್ಲಿ 544 ಕೊಠಡಿಗಳಿಗಾಗಿ ಶಾಲಾವಾರು ಪ್ರಸ್ತಾವನೆ ಜಿಲ್ಲೆಯಿಂದ ಎಸ್.ಎಸ್.ಎ. ಇವರಿಗೆ ಬಂದಿದ್ದು ಇದನ್ನು ಕೇಂದ್ರ ಸರ್ಕಾರವು ಪರಿಗಣಿಸಿಲ್ಲ.

ಇ) ಕೇಂದ್ರ ಸರ್ಕಾರದಲ್ಲಿ ಲಭ್ಯವಿರುವ 2004–05 EMIS ಮಾಹಿತಿಯನ್ವಯ ಯಾವುದೇ ಕೊಠಡಿಗಳು ಉಡುಪಿ ಜಿಲ್ಲೆಗೆ ಮಂಜೂರು ಮಾಡಲು ಪರಿಗಣಿಸಿಲ್ಲ.

ಈ) ಜಿಲ್ಲಾವಾರು 2006–07ನೇ ಸಾಲಿಗೆ ವಿವಿಧ ಚಟುವಟಿಕೆಗಳಿಗೆ ಮಂಜೂರಾಗಿರುವ ಹಣದ ಜಿಲ್ಲಾವಾರು ವಿವರವನ್ನು ಅನುಬಂಧ–1ರಲ್ಲಿ ಮತ್ತು ಶಾಲಾ ಕೊಠಡಿಗಳ ನಿರ್ಮಾಣಕ್ಕೆ 2006–07ನೇ ಸಾಲಿಗೆ ಮಂಜೂರಾಗಿರುವ ಜಿಲ್ಲಾವರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಉ) ಉಡುಪಿ ಜಿಲ್ಲೆಗೆ 2006–07ನೇ ಸಾಲಿನಲ್ಲಿ ರೂ. 597.616 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಆದರೆ ಶಾಲಾ ಕಟ್ಟಡ ನಿರ್ಮಾಣ ಹಣ ಮಂಜೂರಾಗಿರುವುದಿಲ್ಲ.

ಪ್ರಶ್ನೆ ಸಂಖ್ಯೆ 723ಕ್ಕೆ ಅನುಬಂಧ–1

SARVA SHIKSHA ABHIYAN SAMITHI, KARNATAKA

District consolidation of AWP & B 2006-07

Sl. No.	District	Approved for 2006-07 including spillover
1	Bagalkot	2768.032
2	Bangalore Rural	1653.966
3	Bangalore Urban	2774.747
4	Belgaum	5267.037
5	Bellary	6103.111
6	Bidar	5412.671
7	Bijapur	6348.846
8	Chamarajanagar	821.112
9	Chickmagalore	1055.826
10	Chitradurga	1817.186

11	D.K.	1967.747
12	Davanagere	1311.170
13	Dharwad	3469.764
14	Gadag	940.351
15	Gulbarga	8463.519
16	Hassan	1920.775
17	Haveri	1347.054
18	Kodagu	462.123
19	Kolar	3011.783
20	Koppal	2521.552
21	Mandya	781.279
22	Mysore	1899.249
23	Raichur	2857.810
24	Shimoga	1646.861
25	Tumkur	2756.721
26	Udupi	597.616
27	Uttarakannada	2318.033
28	State Intervention	1919.300
29	SIEMAT	0.000
	Total	**74215.242**

SARVA SHIKSHA ABHIYAN SAMITHI KARNATAKA

Annexure-2 for the LA Q 723

DISTRICT-WISE SANCTIONED OF CIVIL WORKS FOR THE YEAR 2006-07

Sl. No.	Name of District	Addl.Class Room	
		Phy	Finance
1	Bagalkot	445	1121.40
2	Bangalore Urban	237	597.24
3	Bangalore Rural	196	493.92
4	Belgaum	1066	2686.32
5	Bellary	1648	4152.96

6	Bidar	1580	3981.60
7	Bijapur	1737	4377.24
8	Chamarajanagar	46	115.92
9	Chickmagalore	32	80.64
10	Chitradurga	209	526.68
11	Davanagere	86	216.72
12	Dharwad	928	2338.56
13	DK	417	1050.84
14	Gadag	103	269.86
15	Gulbarga	2196	5533.92
16	Hassan	242	609.84
17	Haveri	185	466.20
18	Kodagu	0	0.00
19	Kolar	540	1360.80
20	Koppal	526	1325.52
21	Mandya	0	0.00
22	Mysore	122	307.44
23	Raichur	506	1275.12
24	Shimoga	49	123.48
25	Tumkur	281	708.12
26	Udupi	0	0.00
27	Uttarakannada	250	630.00
	Total	**13627**	**34345.30**

819 (724) ಶ್ರೀ ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು, ಬೈಂದೂರು ವಿಧಾನಸಭಾ ಕ್ಷೇತ್ರದ ಕೋಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತಕ್ಕೆ ಒಳಪಟ್ಟ 05 ಪ್ರೌಢಶಾಲೆಗಳು ಮತ್ತು ಒಂದು ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳೀಯ ಶಾಸಕರನ್ನು